ಯಾವುದೇ ಸಲಹೆ ಸೂಚನೆಗಳನ್ನು ಕೊಟ್ಟರೂ ಅದನ್ನು ಗಮನಕ್ಕೆ ತೆಗೆದುಕೊಳ್ಳುವಂತಹ ಪರಿಸ್ಥಿತಿ ಅವರುಗಳಲ್ಲಿ ಇಲ್ಲ. ಸರ್ಕಾರ ಇಲ್ಲಿ ಬಿಲ್ ಅನ್ನು ತರುವಂಥಾದ್ದು, ತಮ್ಮ ಪ್ರತಿಷ್ಠೆಯ ಮೇಲೆ ತರುವಂತಹ ವ್ಯವಸ್ಥೆಗಳಾಗಿದೆ. ಆದುದರಿಂದ ಯಾವುದೇ ಅಮೆಂಡ್‌ಮೆಂಟ್ ಮಾಡಿದರೂ ಕೂಡ ನಮ್ಮ ಪ್ರತಿಷ್ಠೆಗೆ ಏನೋ ಭಾರಿ ಕೊರತೆಯಾಗುತ್ತದೆನ್ನುವಂತಹ ರೀತಿಯಲ್ಲಿ ಮಾತನಾಡುತ್ತಿದ್ದೀರಿ. ಇವತ್ತು ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್ ಹಾಗೂ ಲೆವಿ ಆಫ್ ಇನ್‌ಫ್ರಾಸ್ಟ್ರಕ್ಚರ್ ಬಗ್ಗೆ ನಾವು ಭಾರಿ ಸೂಕ್ಷ್ಮವಾಗಿ ತಮಗೆ ಹೇಳಿದೆವು. ಅದು ಐದು ನೂರು ರೂಪಾಯಿಗಳು ಮ್ಯಾಗ್ನಿಮಮ್ ಇರಬಹುದು, ಆದರೂ 500 ರೂಪಾಯಿಗಳನ್ನು ಹಾಕಿದರೆ ಲೈಫ್ ಟ್ಯಾಕ್ಸ್ ಕೊಟ್ಟದ್ದಕ್ಕಿಂತಲೂ ಜಾಸ್ತಿಯಾದಂತಹ ಸಂದರ್ಭಗಳಾಗುತ್ತವೆ. ತಾವು ಬೇಕಾದರೆ ಇದನ್ನು ಕೌಂಟ್ ಮಾಡಿ, ನೀವು ವಾಹನವನ್ನು ಇಟ್ಟುಕೊಂಡರೆ ಪ್ರತಿ ವರ್ಷ 500 ರೂಪಾಯಿಗಳ ಹಾಗೆ ತೆರಿಗೆ ಎಂದು ಮಾಡಿದರೆ ಇದು ಲೈಫ್ ಟ್ಯಾಕ್ಸ್‌ಗಿಂತ ಜಾಸ್ತಿಯಾಗುವಂತಹ ಸಂದರ್ಭಗಳು ಜಾಸ್ತಿಯಾಗುತ್ತದೆ. ನೀವು ಬೆಂಗಳೂರಿನಲ್ಲಿ ಭಾರೀ ದೊಡ್ಡ ವ್ಯವಸ್ಥೆಗಳನ್ನು ಮಾಡುತ್ತೇವೆಂಬ ಹೆಸರಿನಲ್ಲಿ ಈ ಬಿಲ್ ತರುವುದರ ಮೂಲಕ ಸಾಮಾನ್ಯ ಜನರ ಮೇಲೆ ಸವಾರಿ ಮಾಡುವಂತಹದ್ದು ಸರಿಯಲ್ಲ. ಯಾವುದೇ ಅಮೆಂಡ್‌ಮೆಂಟ್‌ಗಳನ್ನು ಸ್ವೀಕಾರ ಮಾಡುವುದಕ್ಕೆ ತಯಾರಿಲ್ಲವೆಂದರೆ ನಾವು ಇಷ್ಟು ಸಲಹೆಗಳನ್ನು ಕೊಟ್ಟು ಇದಕ್ಕೆ ಗೌರವ ಬರುವಂತಹ ಸಂಗತಿಗಳು ಇಲ್ಲವೆಂದು ಹೇಳುತ್ತೇನೆ. ಈಗ ಎರಡು ಸಣ್ಣ ವಿಚಾರಗಳನ್ನು ಹೇಳಿದ್ದಾರೆ, ವಾಹನಗಳ ಮೇಲೆ ಲೆವಿ ಮಾಡುವಂಥಾದ್ದು, ಇನ್ನೊಂದು ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್ ಮೇಲೆ ಹಾಕಿರುವಂತಹ ಭಾರಿ ಮೊತ್ತ, ತಾವು ಕನಿಷ್ಟ ಇದನ್ನಾದರೂ ಸ್ವೀಕಾರ ಮಾಡಿ ಸೆಕ್ಷನ್ 103ಬಿಯನ್ನಾದರೂ ವಾಪಸ್ಸು ತೆಗೆದುಕೊಳ್ಳುವಂತಹ ಕೆಲಸವನ್ನು ಮಾಡಬಹುದಲ್ಲಾ.

ಶ್ರೀ ಡಿ.ಬಿ.ಚಂದ್ರೇಗೌಡ: ನಾವು ಗರಿಷ್ಠ ಹಾಕಿದ್ದೇವೆ.

ಶ್ರೀ ಡಿ.ಪಿ.ಸದಾನಂದಗೌಡ: ಅದು ನಮಗೆ ಗೊತ್ತಾಗಿದೆ. ನೀವು ಏಕೆ ಸ್ಪೆಸಿಫಿಕ್ ಆಗಿ ಅದನ್ನು ಹೇಳುವಂತಹ ಪ್ರಯತ್ನವನ್ನು ಮಾಡುತ್ತಾ ಇಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ: ನಾವು ಸಂಬಂಧಪಟ್ಟಂತಹ ಕಾರ್ಪೊರೇಷನ್ ಮಾಡಿಕೊಳ್ಳಬಹುದೆಂದು ಹೇಳಿದ್ದೇವೆ.

ಶ್ರೀ ಡಿ.ಪಿ.ಸದಾನಂದಗೌಡ: ಈ ನಿಮ್ಮ ನಿರ್ಲಕ್ಷ್ಯ ಇದು ಜನರ ಮೇಲೆ ಮಾಡುವಂತಹ ಸವಾರಿಯಾಗುತ್ತದೆ. ಆದಕಾರಣ ಸೆಕ್ಷನ್ 103 ಬಿಯನ್ನು ಮಾತ್ರ ಪ್ರತಿಭಟನೆ ಮಾಡಿ ನಾವು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಬಿ.ಜೆ.ಪಿ. ಸದಸ್ಯರುಗಳು ಸದನದಿಂದ ಸಭಾತ್ಯಾಗ ಮಾಡಿದರು)